RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-IVA<br>Part-IVA | ಬೆಂಗಳೂರು, ಶುಕ್ರವಾರ, ಅಕ್ಟೋಬರ್ ೨೮, ೨೦೧೬ (ಕಾರ್ತೀಕ ೬, ಶಕ ವರ್ಷ ೧೯೩೮)<br>Bengaluru, Friday, October 28, 2016 (Karthika 6, Shaka Varsha 1938) | ನಂ. ೧೨೦೬<br>No. 1206 |
|---|---|---|

**ಶಿಕ್ಷಣ ಸಚಿವಾಲಯ**

**ಅಧಿಸೂಚನೆ-I**

**ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 317 ಪಿಜಿಸಿ 2012; ದಿನಾಂಕ:05.10.2016ರ ಕನ್ನಡದ ಅನುವಾದ**

**ಸಂಖ್ಯೆ. ಇಡಿ 317 ಪಿಜಿಸಿ 2012, ಬೆಂಗಳೂರು, ದಿನಾಂಕ: 05.10.2016**

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 48ನೇ ಪ್ರಕರಣದೊಂದಿಗೆ ಓದಲಾದ, 145ನೇ ಪ್ರಕರಣದ (1)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಮಾಡಲು ಉದ್ದೇಶಿಸಿರುವ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕೆಲವು ಶುಲ್ಕಗಳು ಮತ್ತು ದೇಣಿಗೆಗಳ ನಿಯಂತ್ರಣ) ನಿಯಮಗಳು, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 145ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಸದರಿ ಕರಡನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಇವುಗಳನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚನೆ ನೀಡಿದೆ.

ಅನುದಾನರಹಿತ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳನ್ನು, ಅಧಿಸೂಚಿಸಿದ ಶುಲ್ಕವನ್ನು ಸಂಗ್ರಹಣೆ ಮಾಡುವ ರೀತಿಯಲ್ಲಿ ಪಾರದರ್ಶಕತೆ, ಮುಕ್ತತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದು, ಮತ್ತು ವಿವಿಧ ಭೌಗೋಳಿಕ ಸ್ಥಳಗಳಲ್ಲಿ ವೆಚ್ಚದಲ್ಲಿನ ವ್ಯತ್ಯಾಸವನ್ನು ವಸೂಲು ಮಾಡುವುದು ಮತ್ತು ಶಿಕ್ಷಣ ಹಕ್ಕು ಅಧಿನಿಯಮದ 12ನೇ ಪ್ರಕರಣದ (1)(ಸಿ) ಉಪ-ಪ್ರಕರಣದ ಮೇರೆಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸರ್ಕಾರವು ಶುಲ್ಕವನ್ನು ತುಂಬಿಕೊಡುವುದು ಪ್ರಸ್ತಾಪಿತ ಕರಡು ನಿಯಮಗಳ ಉದ್ದೇಶವಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾಗುವುದಕ್ಕೆ ಮೊದಲು ಸದರಿ ಕರಡು ನಿಯಮಕ್ಕೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು, ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬಹುಮಹಡಿ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ಕಳುಹಿಸಬಹುದು.

**ಕರಡು ನಿಯಮಗಳು**

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕೆಲವು ಶುಲ್ಕಗಳು ಮತ್ತು ದೇಣಿಗೆಗಳ ನಿಯಂತ್ರಣ) (ತಿದ್ದುಪಡಿ) ನಿಯಮಗಳು, 2016, ಎಂದು ಕರೆಯತಕ್ಕದ್ದು.

(2) ಅವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 4ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕೆಲವು ಶುಲ್ಕಗಳು ಮತ್ತು ದೇಣಿಗೆಗಳ ನಿಯಂತ್ರಣ) ನಿಯಮಗಳು, 1999ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಿದೆ) 4ನೇ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"4. ಅನುದಾನರಹಿತ ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಶುಲ್ಕ.-** (1) ಪ್ರತಿಯೊಂದು ಖಾಸಗಿ ಅನುದಾನರಹಿತ ಶೈಕ್ಷಣಿಕ ಸಂಸ್ಥೆಯು, ಮುಂದಿನ ಕ್ಯಾಲೆಂಡರ್ ವರ್ಷದಲ್ಲಿ ಪ್ರಾರಂಭವಾಗುವ ಮುಂಬರುವ ಶೈಕ್ಷಣಿಕ ವರ್ಷಕ್ಕಾಗಿ ಅದರ ಶುಲ್ಕ ವಿನ್ಯಾಸವನ್ನು, 31ನೇ ಮಾರ್ಚ್‌ರಂದು ಮುಕ್ತಾಯವಾಗುವ ಹಿಂದಿನ ಹಣಕಾಸು ವರ್ಷದ ಅದರ ಹಣಕಾಸಿನ ಲೆಕ್ಕಪರಿಶೋಧನಾ

ವರದಿಯನ್ನು, ಬೋಧನಾ ಸಂಪನ್ಮೂಲಗಳ ವಿವರಗಳನ್ನು, ಸಾರ್ವತ್ರಿಕ ಪರೀಕ್ಷೆಯ ಫಲಿತಾಂಶವನ್ನು ಮತ್ತು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ನಿಯಮಗಳನುಸಾರವಾಗಿರುವ ಶುಲ್ಕ ವಿನ್ಯಾಸವನ್ನು ಅನುಪಾಲನೆ ಮಾಡಿರುವುದನ್ನು ತೋರಿಸುವ ವಿವರ ಪಟ್ಟಿಯನ್ನು ಪ್ರತಿಯೊಂದು ಕ್ಯಾಲೆಂಡರ್ ವರ್ಷದ 31ನೇ ಡಿಸೆಂಬರ್ ಒಳಗೆ ಬಹಿರಂಗಪಡಿಸತಕ್ಕದ್ದು:

(2) ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗೆ (1)ನೇ ಉಪ-ನಿಯಮದ ಮೇರೆಗೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಂಸ್ಥೆಯು ಬಹಿರಂಗಪಡಿಸಿದ ಶುಲ್ಕ ವಿನ್ಯಾಸವನ್ನು ಮೀರದಂತೆ ಶುಲ್ಕ ಸಂಗ್ರಹಿಸಲು ಅನುಮತಿಸತಕ್ಕದ್ದು.

ಪರಂತು, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ, 2009 (2009ರ ಕೇಂದ್ರ ಅಧಿನಿಯಮ ಸಂಖ್ಯೆ. 35)ರ 12ನೇ ಪ್ರಕರಣದ (1)ನೇ ಉಪ-ಪ್ರಕರಣದ (ಸಿ) ಬಾಬ್ತುವಿನ ಮೇರೆಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ಶುಲ್ಕವನ್ನು ಸಂಗ್ರಹಿಸತಕ್ಕದ್ದಲ್ಲ.

(3) ಈ ಸಂಬಂಧದಲ್ಲಿ ರಚಿಸಿದ ಯಾವುದೇ ನಿಯಮಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಮುಂಬರುವ ಶೈಕ್ಷಣಿಕ ವರ್ಷದಲ್ಲಿ, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಯಮ, ಇತ್ಯಾದಿ) ನಿಯಮಗಳು, 1995ರ ನಿಯಮ 10(3)(ಬಿ)(ii)ರ ಮೇರೆಗೆ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆ ವಿಧಿಸುವ ಈ ಬೋಧನಾ ಶುಲ್ಕವನ್ನು ಈ ಕೆಳಕಂಡ ರೀತಿಯಲ್ಲಿ ನಿರ್ಧರಿಸಿದ ಮೌಲ್ಯವನ್ನು ಮೀರತಕ್ಕದ್ದಲ್ಲ, ಎಂದರೆ.-

(i) ಸಾದಿಲ್ವಾರು, ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳು, ಬಾಡಿಗೆ, ಋಣ ತೀರಿಕೆ ಕಾರ್ಯ, ಸವಕಳಿ ಇತ್ಯಾದಿಗಳಿಗೆ ಸಂಬಂಧಿಸಿದ ಹೆಚ್ಚುವರಿ ಮೊಬಲಗು ಮತ್ತು ಹಿಂದಿನ ಹಣಕಾಸು ವರ್ಷ ಮತ್ತು ಮುಂಬರುವ ಶೈಕ್ಷಣಿಕ ವರ್ಷದ ಮಧ್ಯಂತರ ಅವಧಿಯಲ್ಲಿನ ಹೆಚ್ಚಳವನ್ನು ಒಳಗೊಂಡು, 31ನೇ ಮಾರ್ಚ್‌ರಂದು ಮುಕ್ತಾಯವಾಗುವ ಹಿಂದಿನ ಹಣಕಾಸು ವರ್ಷದಲ್ಲಿ ಹೊರಗುತ್ತಿಗೆ ಸಿಬ್ಬಂದಿಯನ್ನು ಒಳಗೊಂಡಂತೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಭರಿಸಲಾದ ವಾಸ್ತವಿಕ ವೇತನ ವೆಚ್ಚವನ್ನು ಆಧರಿಸಿ ಮುಂಬರುವ ಶೈಕ್ಷಣಿಕ ವರ್ಷದ ಒಟ್ಟು ಪ್ರಮಾಣ ವೆಚ್ಚವನ್ನು ಲೆಕ್ಕಹಾಕತಕ್ಕದ್ದು.

**ವಿವರಣೆ:** ಈ ಉಪ-ನಿಯಮದ ಉದ್ದೇಶಕ್ಕಾಗಿ, ಸಂಬಳದ ವೆಚ್ಚವು ಇವುಗಳನ್ನು ಒಳಗೊಳ್ಳತಕ್ಕದ್ದು,-

(ಎ) ಭವಿಷ್ಯನಿಧಿ (ಪ್ರಾವಿಡೆಂಟ್ ಫಂಡ್) ಇಎಸ್‌ಐ, ಪಿಂಚಣಿ ನಿಧಿ ಮತ್ತು ವ್ಯವಸ್ಥಾಪನಾ ಮಂಡಳಿಯು ರಚಿಸಿದ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ ಜೊತೆಗೆ ವಂತಿಗೆ; ಮತ್ತು

(ಬಿ) ನಗದೀಕರಣದ ಪ್ರಯೋಜನಗಳು, ಎಲ್‌ಟಿಸಿ/ಹೆಚ್‌ಟಿಸಿ ಪ್ರಯೋಜನಗಳು, ವೈದ್ಯಕೀಯ ಭತ್ಯೆ, ಪ್ರಯಾಣ ಭತ್ಯೆ ಮತ್ತು ಸಂಸ್ಥೆಯ ಸಿಬ್ಬಂದಿಗೆ ನೀಡಲಾದ ಇತರೆ ಯಾವುವಾದರೂ ಭತ್ಯೆಗಳಿದ್ದರೆ, ಅಂಥ ಭತ್ಯೆಗಳು, ಅವು;

(ii) ಹೆಚ್ಚುವರಿ ಮೊತ್ತವು, ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಸಂಸ್ಥೆಯ ಭೌಗೋಳಿಕ ಸ್ಥಳದ ಆಧಾರದ ಮೇಲೆ ಅದರ (3) ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಮೇಲಿನ (i)ನೇ ಖಂಡದಲ್ಲಿ ಉಲ್ಲೇಖಿಸಲಾದ 31ನೇ ಮಾರ್ಚ್‌ರಂದು ಕೊನೆಗೊಂಡ ಹಿಂದಿನ ಆರ್ಥಿಕ ವರ್ಷದಲ್ಲಿನ ವಾಸ್ತವಿಕ ವೇತನ ವೆಚ್ಚವನ್ನಾಧರಿಸಿ, ಅಂಥ ಶೇಕಡಾವಾರನ್ನು ಅನ್ವಯಿಸಿ ಪಡೆದ ಮೌಲ್ಯವನ್ನು ನಿರ್ಧರಿಸಿದ ಮೌಲ್ಯಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ:

**ಕೋಷ್ಟಕ**

| ಕ್ರಮ ಸಂಖ್ಯೆ | ಸಂಸ್ಥೆಯ ಭೌಗೋಳಿಕ ಸ್ಥಳ ಮತ್ತು ಪ್ರದೇಶಗಳು | ವಾಸ್ತವಿಕ ವೇತನ ವೆಚ್ಚದ ಶೇಕಡಾವಾರು |
|---|---|---|
| (1) | (2) | (3) |
| 1 | ಗ್ರಾಮ ಪಂಚಾಯತಿ/ ಪಟ್ಟಣ ಪಂಚಾಯತಿ/ ಪಟ್ಟಣ ಪುರಸಭೆ (ಟೌನ್ ಮುನ್ಸಿಪಲ್ ಕೌನ್ಸಿಲ್) | ಶೇಕಡ ಐವತ್ತು |
| 2 | ನಗರ ಪುರಸಭೆ/ ಮುನ್ಸಿಪಲ್ ಕೌನ್ಸಿಲ್ | ಶೇಕಡ ಅರವತ್ತು |
| 3 | ಬಿಬಿಎಂಪಿ ಹೊರತುಪಡಿಸಿ ಇತರೆ ಪೌರನಿಗಮ | ಶೇಕಡ ಎಪ್ಪತ್ತೈದು |
| 4 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಶೇಕಡ ನೂರು |

(iii) ಶೈಕ್ಷಣಿಕ ವರ್ಷವನ್ನು ಖಚಿತಪಡಿಸುವುದಕ್ಕಾಗಿ, ಪ್ರಮಾಣಕ ನಿವ್ವಳ ವೆಚ್ಚ (ಎನ್‌ಎನ್‌ಇ)ವನ್ನು ಉಪ-ನಿಯಮ 3(i) ಮತ್ತು 3(ii)ರ ಮೇರೆಗೆ ಪ್ರಮಾಣದ ಒಟ್ಟು ವೆಚ್ಚದ ಆಧಾರದ (ಎನ್‌ಟಿಇ) ಮೇಲೆ ಈ ಕೆಳಗೆ ಹೇಳಲಾದ ಮೊತ್ತವನ್ನು ಕಳೆದು, ಲೆಕ್ಕಹಾಕತಕ್ಕದ್ದು:

(ಎ) ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ, 2009 (2009ರ ಕೇಂದ್ರ ಅಧಿನಿಯಮ ಸಂ. 35) ರ 12ನೇ ಪ್ರಕರಣದ (1)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗೆ, 31ನೇ ಮಾರ್ಚ್‌ರಂದು ಕೊನೆಗೊಂಡ ಹಿಂದಿನ ಆರ್ಥಿಕ ವರ್ಷಾವಧಿಯಲ್ಲಿ ಪ್ರವೇಶ ನೀಡಲಾದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಸ್ವೀಕರಿಸಿದ ಅಥವಾ ಬಾಕಿ ಇರುವ ಮರುಪಾವತಿ ಮೊತ್ತ;

(ಬಿ) 31ನೇ ಮಾರ್ಚ್‌ರಂದು ಕೊನೆಗೊಂಡ ಹಿಂದಿನ ಆರ್ಥಿಕ ವರ್ಷಾವಧಿಯಲ್ಲಿ ಸದರಿ ನಿಯಮಗಳ 6ನೇ ನಿಯಮದ (1)ನೇ ಉಪನಿಯಮದ ಮೇರೆಗೆ ಸಂಗ್ರಹಿಸಿದ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಶುಲ್ಕ;

(ಸಿ) ಬೋಧನಾ ಚಟುವಟಿಕೆಗಳ ಮೇಲೆ ಆವರ್ತಕ ವೆಚ್ಚಕ್ಕೆ ಪೂರಕವಾಗಿರುವ ಉದ್ದೇಶದಿಂದ, 31ನೇ ಮಾರ್ಚ್‌ರಂದು ಕೊನೆಗೊಂಡ ಹಿಂದಿನ ಆರ್ಥಿಕ ವರ್ಷಾವಧಿಯಲ್ಲಿ ಸದರಿ ನಿಯಮಗಳ 6ನೇ ನಿಯಮದ (3) ನೇ ಉಪನಿಯಮದ ಅಡಿಯಲ್ಲಿ ಸ್ವೀಕರಿಸಿದ ಯಾವುದೇ ಹಣ;

(ಡಿ) 31ನೇ ಮಾರ್ಚ್‌ರಂದು ಕೊನೆಗೊಂಡ ಹಿಂದಿನ ಆರ್ಥಿಕ ವರ್ಷಾವಧಿಯಲ್ಲಿ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಯಮ ಇತ್ಯಾದಿ) ನಿಯಮಗಳು, 1955ರ 10ನೇ ನಿಯಮದ (3)(ಎ)(ii)ನೇ ಉಪನಿಯಮದ ಮೇರೆಗೆ ಸಂಗ್ರಹಿಸಿದ ಅವಧಿ ಶುಲ್ಕ;

(ಇ) ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ನಿಯಮ, ಇತ್ಯಾದಿ) ನಿಯಮಗಳು, 1995ರ 10ನೇ ನಿಯಮದ (3)(ಸಿ) ಉಪನಿಯಮದ ಮೇರೆಗೆ 31ನೇ ಮಾರ್ಚ್‌ರಂದು ಅಂತ್ಯಗೊಳ್ಳುವ ವರ್ಷದಲ್ಲಿ ಹಿಂದಿನ ಹಣಕಾಸು ವರ್ಷಾವಧಿಯ ಸಂಗ್ರಹಿಸಿದ ವಿಶೇಷ ಅಭಿವೃದ್ಧಿ ಶುಲ್ಕ.

(iv) (1)ನೇ ಉಪನಿಯಮದ ಮೇರೆಗೆ ಬಹಿರಂಗಪಡಿಸಿದ ಶುಲ್ಕ ವಿನ್ಯಾಸಕ್ಕೆ ಅನುಗುಣವಾಗಿ (1)ನೇ ಉಪನಿಯಮದ ಮೇರೆಗೆ ಪ್ರಕಟಿಸಿದ ಶುಲ್ಕಗಳ ಅನುಸಾರ, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ, 2009 (2009ರ ಕೇಂದ್ರ ಅಧಿನಿಯಮ ಸಂಖ್ಯೆ 35)ರ 12ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಬಾಬ್ತಿನ ಮೇರೆಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಎಲ್ಲಾ ವಿದ್ಯಾರ್ಥಿಗಳಿಂದ ಸಂಗ್ರಹಿಸಲು ಉದ್ದೇಶಿಸಿದ ಒಟ್ಟು ಬೋಧನಾ ಶುಲ್ಕವು, (3)ನೇ ಉಪನಿಯಮದ (iii) ಬಾಬ್ತಿನ ಮೇರೆಗೆ ಲೆಕ್ಕಹಾಕಲಾದಂತೆ ಪ್ರಮಾಣಕ ನಿವ್ವಳ ವೆಚ್ಚವನ್ನು (ಎನ್‌ಎನ್‌ಇ) ಮೀರತಕ್ಕದ್ದಲ್ಲ:

ಪರಂತು, ಈ ಉಪನಿಯಮದ ಉದ್ದೇಶಕ್ಕಾಗಿ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯು, ಮೇ 31ರಂದು ಮುಕ್ತಾಯವಾಗುವ ಹಿಂದಿನ ಶೈಕ್ಷಣಿಕ ವರ್ಷಾವಧಿಯಲ್ಲಿ ವಿದ್ಯಾರ್ಥಿಗಳ ಶಿಕ್ಷಣ ಸಂಸ್ಥೆಯ ಹೆಸರಿನ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯು, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ, 2009 (2009ರ ಕೇಂದ್ರ ಅಧಿನಿಯಮ 35)ರ 12ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಬಾಬ್ತಿನ ಮೇರೆಗೆ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯಾಗಿರತಕ್ಕದ್ದು.

(v) ಮುಂಬರುವ ಶೈಕ್ಷಣಿಕ ವರ್ಷದಲ್ಲಿ, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕುಗಳು ಅಧಿನಿಯಮ, 2009 (2009ರ ಕೇಂದ್ರ ಅಧಿನಿಯಮ 35)ರ 12ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಬಾಬ್ತಿನ ಮೇರೆಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಎಲ್ಲಾ ವಿದ್ಯಾರ್ಥಿಗಳಿಂದ ಸಂಗ್ರಹಿಸಲು ಉದ್ದೇಶಿಸಿದ ಒಟ್ಟು ಬೋಧನಾ ಶುಲ್ಕವು ಪ್ರಸಕ್ತ ಶೈಕ್ಷಣಿಕ ವರ್ಷಾವಧಿಯಲ್ಲಿ ವಿಧಿಸಲಾಗುವ ಒಟ್ಟು ಬೋಧನಾ ಶುಲ್ಕದ ಶೇಕಡ ಹತ್ತಕ್ಕಿಂತ ಹೆಚ್ಚು ಇರತಕ್ಕದ್ದಲ್ಲ.

(vi) ಮೇಲಿನ (iv) ಮತ್ತು (v)ನೇ ಖಂಡವನ್ನು ಪಾಲಿಸುವುದಕ್ಕೆ ಒಳಪಟ್ಟು, ಖಾಸಗಿ ಅನುದಾನರಹಿತ ಶೈಕ್ಷಣಿಕ ಸಂಸ್ಥೆಯು, ವಿವಿಧ ತರಗತಿಗಳಿಗೆ ಬೇರೆಬೇರೆ ರೀತಿಯ ಬೋಧನಾ ಶುಲ್ಕವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಹೊಂದಿರತಕ್ಕದ್ದು.

(4) ಹೆಚ್ಚುವರಿ ಬೋಧನಾ ಶುಲ್ಕ ಜೊತೆಯಲ್ಲಿ ಹೆಚ್ಚುವರಿಯಾಗಿ, ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಯು, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯನಿಯಮ ಇತ್ಯಾದಿ) ನಿಯಮಗಳು, 1995ರ 10(3)(ಎ)(ii)ನೇ ನಿಯಮದ ಮೇರೆಗೆ ವಿಧಿಸಬಹುದಾದ ಅವಧಿ ಶುಲ್ಕವು, ಬೋಧನಾ ಶುಲ್ಕದ ಶೇಕಡ ಐದನ್ನು ಮೀರತಕ್ಕದ್ದಲ್ಲ. ಅಂಥ ಅವಧಿ ಶುಲ್ಕವು ಎಲ್ಲ ಸಹ ಪಠ್ಯ ಚಟುವಟಿಕೆಗಳ ಶುಲ್ಕ, ಪರೀಕ್ಷಾ ಶುಲ್ಕ, ಪ್ರಯೋಗ ಶಾಲೆಯ ಶುಲ್ಕ, ಕ್ರೀಡಾಶುಲ್ಕ, ಸಾಂಸ್ಕೃತಿ ಕಾರ್ಯಕ್ರಮಗಳ ಶುಲ್ಕ, ನಿಯತ ಬೋಧನೆಗೆ ಪೂರಕವಾಗಿರುವ ಚಟುವಟಿಕೆ ಮತ್ತು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ಇತರ ಚಟುವಟಿಕೆಗೆ ಸಂಬಂಧಿಸಿದ ಶುಲ್ಕವನ್ನು ಒಳಗೊಳ್ಳುತ್ತದೆ.

(5) (1)ನೇ ಉಪನಿಯಮದ ಮೇರೆಗೆ ಒಂದು ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಯು ಹೊರಡಿಸಿದ ಪ್ರಕಟಣೆಯು ಏನೇ ಒಳಗೊಂಡಿದ್ದರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯು ಅಧಿಸೂಚನೆಯ ಮುಖಾಂತರ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಆ ಸಂಸ್ಥೆಯ ಹಣಕಾಸು ಮತ್ತು ಶುಲ್ಕಗಳ ಲೆಕ್ಕಗಳ ವಿಶೇಷ ಲೆಕ್ಕಪರಿಶೋಧನೆಯಾಗುವಂತೆ ಮಾಡಬಹುದು.

**3. 6ನೇ ನಿಯಮದ ತಿದ್ದುಪಡಿ.–** ಸದರಿ ನಿಯಮಗಳ 6ನೇ ನಿಯಮದ (1)ನೇ ಉಪನಿಯಮದಲ್ಲಿನ ಕೋಷ್ಟಕದಲ್ಲಿರುವ "25.00" ಅಂಕಿಗಳು ಇರುವ ಕಡೆಯಲ್ಲೆಲ್ಲ "50.00" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

**4. 7ನೇ ನಿಯಮವನ್ನು ಸೇರಿಸುವುದು.–** ಸದರಿ ನಿಯಮಗಳ 6ನೇ ನಿಯಮದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"7. ಉಲ್ಲಂಘನೆಗಾಗಿ ಜುಲ್ಮಾನೆ–** ಈ ನಿಯಮಗಳ ಅಥವಾ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯನಿಯಮನ ಇತ್ಯಾದಿ) ನಿಯಮಗಳು, 1995ರ ಯಾವುದೇ ಉಪಬಂಧಗಳ ಉಲ್ಲಂಘನೆಗಾಗಿ ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 39ನೇ ಪ್ರಕರಣದ ಮೇರೆಗೆ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ಹಿಂತೆಗೆದುಕೊಳ್ಳುವ ಕ್ರಮಕ್ಕೆ ಒಳಗಾಗುವುದರ ಜೊತೆಗೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕದ ನಿಷೇದ) ಅಧಿನಿಯಮ, 1984ರ 7ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂಥ ಜುಲ್ಮಾನೆಗಳಿಗೆ ಮತ್ತು ಮಕ್ಕಳ ಉಚಿತ ಮತ್ತು

ಕಡ್ಡಾಯ ಶಿಕ್ಷಣ ಹಕ್ಕುಗಳು ಅಧಿನಿಯಮ, 2009 (2009ರ ಕೇಂದ್ರ ಅಧಿನಿಯಮ 35)ರ 13ನೇ ಪ್ರಕರಣದ (2)(ಎ) ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಜುಲ್ಮಾನೆಗೆ ಗುರಿಯಾಗತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರೇವಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ).

**ಅಧಿಸೂಚನೆ-II**

**ಸಂಖ್ಯೆ. ಇಡಿ 317 ಪಿಜಿಸಿ 2012, ಬೆಂಗಳೂರು, ದಿನಾಂಕ: 05.10.2016**

ಕರ್ನಾಟಕ ಶಿಕ್ಷಣ ಅಧಿನಿಯಮ, 1983 (1995ರ ಕರ್ನಾಟಕ ಅಧಿನಿಯಮ 1)ರ 145ನೇ ಪ್ರಕರಣದ (1)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಮಾಡಲು ಉದ್ದೇಶಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ನಿಯಮ ಇತ್ಯಾದಿ) ನಿಯಮಗಳು, 1995ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 145ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಸದರಿ ಕರಡನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಇವುಗಳನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚನೆ ನೀಡಿದೆ.

ಅನುದಾನರಹಿತ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳನ್ನು, ಅಧಿಸೂಚಿಸಿದ ಶುಲ್ಕವನ್ನು ಸಂಗ್ರಹಣೆ ಮಾಡುವ ರೀತಿಯಲ್ಲಿ ಪಾರದರ್ಶಕತೆ, ಮುಕ್ತತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದು, ಮತ್ತು ವಿವಿಧ ಭೌಗೋಳಿಕ ಸ್ಥಳಗಳಲ್ಲಿ ವೆಚ್ಚದಲ್ಲಿನ ವ್ಯತ್ಯಾಸವನ್ನು ವಸೂಲು ಮಾಡುವುದು ಮತ್ತು ಶಿಕ್ಷಣ ಹಕ್ಕು ಅಧಿನಿಯಮದ 12ನೇ ಪ್ರಕರಣದ (1)(ಸಿ) ಉಪ-ಪ್ರಕರಣದ ಮೇರೆಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸರ್ಕಾರವು ಶುಲ್ಕವನ್ನು ತುಂಬಿಕೊಡುವುದು ಪ್ರಸ್ತಾಪಿತ ಕರಡು ನಿಯಮಗಳ ಉದ್ದೇಶವಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾಗುವುದಕ್ಕೆ ಮೊದಲು ಸದರಿ ಕರಡು ನಿಯಮಕ್ಕೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು, ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬಹುಮಹಡಿ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ಕಳುಹಿಸಬಹುದು.

ಕರಡು ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.-** ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯನಿಯಮ ಇತ್ಯಾದಿ) (ತಿದ್ದುಪಡಿ) ನಿಯಮಗಳು, 2016 ಎಂದು ಕರೆಯತಕ್ಕದ್ದು.

(2) ಅವು, 2017-18ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪರಿಣಾಮಕಾರಿಯಾಗಿ ಜಾರಿಗೆ ಬರತಕ್ಕದ್ದು.

2. **10ನೇ ನಿಯಮದ ತಿದ್ದುಪಡಿ.-** ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯನಿಯಮ ಇತ್ಯಾದಿ) ನಿಯಮಗಳು, 1995ರಲ್ಲಿ 10ನೇ ನಿಯಮದಲ್ಲಿ (3)ನೇ ಉಪನಿಯಮದಲ್ಲಿ (ಸಿ) ಖಂಡದಲ್ಲಿ (ii) ನೇ ಬಾಬ್ತಿನಲ್ಲಿ "ಪ್ರತಿ ವರ್ಷ ರೂ. 600/-" ಎಂಬ ಅಕ್ಷರಗಳು, ಅಂಕಿಗಳು ಮತ್ತು ಪದಗಳಿಗೆ "ಪ್ರತಿವರ್ಷ ಎರಡು ಸಾವಿರದ ಐದು ನೂರು ರೂಪಾಯಿಗಳು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

3. **ಪರಂತುಕವನ್ನು ಸೇರಿಸುವುದು.-** ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯನಿಯಮ ಇತ್ಯಾದಿ) ನಿಯಮಗಳು, 1995ರ 10ನೇ ನಿಯಮದ (3)ನೇ ಉಪನಿಯಮದಲ್ಲಿ (ಸಿ) ಖಂಡದಲ್ಲಿ (ii)ನೇ ಬಾಬ್ತಿನ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:

"ಪರಂತು, ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕುಗಳ ಅಧಿನಿಯಮ, 2009 (2009ರ ಕೇಂದ್ರ ಅಧಿನಿಯಮ, 35)ರ 12ನೇ ಪ್ರಕರಣ (1)ನೇ ಉಪಪ್ರಕರಣದ (ಸಿ) ಬಾಬ್ತಿನ ಮೇರೆಗೆ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ವಿಶೇಷ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರೇವಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 1000